

ಮಕ್ಕಳು ಶಾಲೆಗೆ ಸಂತೋಷವಾಗಿ ಹೋಗಬೇಕೆಂದರೆ ಶಾಲೆಯ ವಾತಾವರಣ ಸೌಹಾರ್ದಯುತವಾಗಿ, ಉತ್ಸಾಹದಿಂದ ಕೂಡಿರಬೇಕು. ಶಿಕ್ಷಕರು ಮತ್ತು ಪೋಷಕರು ನಡುವೆ ಒಳ್ಳೆಯ ಸಂಬಂಧ, ಸರಿಯಾದ ಸಂವಹನವಿರಬೇಕು. ಭಯ–, ಹಿಂಜರಿಕೆಗಳ ಮಧ್ಯೆ ಕಲಿಕೆ ನಡೆಯಲಾರದು. ಇದನ್ನು ಪೋಷಕರು ಮತ್ತು –ಶಿಕ್ಷಕರು ಇಬ್ಬರೂ ಮನಗಾಣಬೇಕು. ಒಂದು ಪರಿಣಾಮಕಾರಿಯಾದ ತರಗತಿಯನ್ನು ರೂಪಿಸುವ ಸಾಮರ್ಥ್ಯ ನಿಸ್ಸಂಶಯವಾಗಿ ಶಿಕ್ಷಕನದ್ದೇ. ಶಿಕ್ಷಕರ ಈ ಸಾಮರ್ಥ್ಯವನ್ನು ಸ್ವತಃ ಶಿಕ್ಷಕನೂ, ಪೋಷಕರೂ ತಿಳಿದಿರಬೇಕು. ಬಹಳಷ್ಟು ಪೋಷಕರು ಮೇಲ್ನೋಟಕ್ಕೆ ಈ ಮಾತನ್ನು ಒಪ್ಪಿದರೂ ಹಾಗೆ ಪ್ರಾಯೋಗಿಕವಾಗಿ ನಡೆದುಕೊಳ್ಳುವುದಿಲ್ಲ. ಒಂದೋ ಶಾಲೆಯ ಕಡೆ ತಲೆಯನ್ನೇ ಹಾಕದೆ, ಮಕ್ಕಳು ಚೆನ್ನಾಗಿ ಓದಬೇಕೆಂದು ಮಾತ್ರ ನಿರೀಕ್ಷಿಸುತ್ತಾರೆ. ಇಲ್ಲವೇ, ಶಿಕ್ಷಕರ ಕಾರ್ಯದಲ್ಲಿ ಮತ್ತೆ ಮತ್ತೆ ಅಡ್ಡಿ ಮಾಡುವಂತೆ ಅವರಿಂದ ಅತಿ ನಿರೀಕ್ಷೆ ಹೊಂದಿರುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಶಿಕ್ಷಕರ– –ಪೋಷಕರ ನಡುವಣ ಘರ್ಷಣೆಗಳಿಗೆ ಮಕ್ಕಳು ಬಲಿಪಶುಗಳಾಗುತ್ತಾರೆ.

ಮಕ್ಕಳು ಸಹಜವಾಗಿ ಕಲಿಯುವ ಸಾಮರ್ಥ್ಯವುಳ್ಳವರು. ಈ ಕಲಿಕೆಯ ಸಾಮರ್ಥ್ಯಕ್ಕೆ ಒಂದು ನಿರ್ದಿಷ್ಟ ಚೌಕಟ್ಟು, ಶಿಸ್ತು ಕೊಡುವುದು ಶಾಲೆಯ ಕೆಲಸ. ಆದರೆ ಈ ಶಿಸ್ತು ಅತಿಯಾಗದಂತೆ ಪೋಷಕರು ಮತ್ತು ಶಾಲೆ– ಇಬ್ಬರೂ ಎಚ್ಚರ ವಹಿಸಬೇಕು. ಪಠ್ಯಕ್ರಮ ಯಾವುದೇ ಆಗಲಿ, ಕಲಿಕೆ ಆಸಕ್ತಿ ಪೂರ್ಣವಾಗುವಂತೆ, ಹೊರೆಯಾಗದಂತೆ ಮಾಡುವುದು ಮುಖ್ಯ. ಈ ಕಲಿಕೆ ಜೀವನದಲ್ಲಿ ಪ್ರಾಯೋಗಿಕವಾಗಿ ಉಪಯುಕ್ತವೂ ಆಗಬೇಕು.

ಮಕ್ಕಳಿಗೆ ಶಾಲೆ ಇಷ್ಟವಾಗುವ ಬಹು ಮುಖ್ಯ ಕಾರಣವೆಂದರೆ ಶಾಲೆಯಲ್ಲಿ ಅವರಿಗೆ 'ತಾವು ಎಲ್ಲರಿಗೆ ಬೇಕಾದ ವ್ಯಕ್ತಿ' ಎಂಬ ಭಾವನೆ ಇರುವುದು. ಅಲ್ಲಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶ ಅವರಿಗೆ ಮುಕ್ತವಾಗಿರುವುದು. ಹೀಗಿರಬೇಕಾದರೆ ಅವರು ನಿಯಮಿತವಾಗಿ ಶಾಲೆಗೆ ಬರುವುದು ಅತ್ಯಗತ್ಯ! ಪ್ರತಿಯೊಂದು ಮಗುವನ್ನು ಹೆಸರು ಹಿಡಿದು, ಶಾಲೆಗೆ ಬಂದಾಕ್ಷಣ ಮಾತನಾಡಿಸುವ ಶಿಕ್ಷಕರ ತರಗತಿಯಲ್ಲಿ ಹಾಜರಿ, ಅಂಕ ಗಳಿಕೆ ಮತ್ತು ಒಳ್ಳೆಯ ನಡವಳಿಕೆ ಹೆಚ್ಚಿದ್ದದ್ದು ಅಧ್ಯಯನವೊಂದರಲ್ಲಿ ಇತ್ತೀಚೆಗೆ ಕಂಡು ಬಂತು!

ಮಕ್ಕಳ ಶಾಲಾ ನಿರಾಕರಣೆಗೆ ಹಲವು ಕಾರಣಗಳಿರುತ್ತವೆ. ಹಾಗಾಗಿ ಮಗು ಶಾಲೆಗೆ ಹೋಗುವುದಿಲ್ಲವೆಂದರೆ 'ಶಾಲೆಯದೇ ಏನೋ ಸಮಸ್ಯೆ' ಎಂದು ಶಾಲೆ ಬದಲಿಸಬೇಡಿ. ಮೊದಲು ಶಾಲೆಗೆ ಹೊಂದಿಕೊಳ್ಳಲು ಮಗುವಿಗೆ ಏನು ಅಡ್ಡಿಯಾಗುತ್ತಿದೆ ಎಂಬುದನ್ನು ಅವಲೋಕಿಸಿ ನೋಡಿ. ಶಾಲೆ ಬದಲಿಸುವುದರ ಮುನ್ನ ಆಪ್ತ ಸಲಹೆ ಪಡೆಯಲು ಹಿಂಜರಿಯಬೇಡಿ.

## ಸಹನೀಯವಾಗಿಸುವುದು ಹೇಗೆ?

ಶಾಲೆಯ ವಾತಾವರಣವನ್ನು ಸಹನೀಯ ಮಾಡಿಕೊಳ್ಳಲು, ಓದುವ ಗಂಭೀರತೆಯನ್ನೂ 'ವಿನೋದ'ವಾಗಿ ಮಾರ್ಪಡಿಸಿಕೊಳ್ಳಲು ಮಕ್ಕಳೇ ಹಲವು ಸಹಜ ದಾರಿಗಳನ್ನು ಕಂಡುಕೊಂಡಿರುತ್ತಾರೆ. ಪಿಸುಗುಡುತ್ತಾ ಮಾತನಾಡುವುದು, ಚೀಟಿಗಳನ್ನು ಪಾಸ್ ಮಾಡುವುದು, ಕಸದ ಬುಟ್ಟಿಯ ಬಳಿ ಹೋಗಿ ಪೆನ್ಸಿಲ್ ಹೆರೆಯುತ್ತಾ ಮಾತನಾಡುವುದು, ಹಗಲುಗನಸು ಕಾಣುವುದು– ಇವೆಲ್ಲವೂ ಮಕ್ಕಳ ಏಕತಾನತೆಯ ಬೇಸರ ಕಳೆದುಕೊಳ್ಳುವ ವಿಧಾನಗಳು. ಶಿಕ್ಷಕರು ಮತ್ತು ಪೋಷಕರ ಪ್ರಕಾರ, ಇವೆಲ್ಲವೂ ನಡವಳಿಕೆಯ ದೋಷಗಳು! ಕಲಿಕೆಯಲ್ಲಿ ಮಕ್ಕಳಿಗೆ ಆಸಕ್ತಿಯಿಲ್ಲವೆಂದು ತೋರಿಸುವ ನಡವಳಿಕೆಗಳು!

ಮಕ್ಕಳು ಮತ್ತು ಪೋಷಕರ ನಡುವೆ, ಮಕ್ಕಳು ಮತ್ತು ಶಿಕ್ಷಕರ ನಡುವಿನ ಮುಕ್ತ ಸಂವಹನ– ಇಂದಿನ ಶಾಲಾ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಬಹುಮುಖ್ಯ ಅಂಶ. ಮಕ್ಕಳೊಡನೆ ಸಮಯ ಕಳೆಯದ ಹೊರತು, ಅವರ ಮನಸ್ಸನ್ನು ಅರಿಯುವ ಸಾಧ್ಯತೆಯೂ ಇಲ್ಲ. ಮಕ್ಕಳು ಹಿರಿಯರ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಿಯೇ ಇರುತ್ತಾರಷ್ಟೇ. ಹಾಗಾಗಿ ನೇರವಾಗಿ ತಮಗನ್ನಿಸಿದ್ದನ್ನು ಅವರು ಹಿರಿಯರ ಬಳಿ ಹೇಳುವ ಸಾಧ್ಯತೆ ಬಲು ಕಡಿಮೆ. ಹಿರಿಯರು ತಾವು ದೊಡ್ಡವರಾದಂತೆ, 'ನಾವೂ ಹಿಂದೆ ಮಕ್ಕಳಾಗಿದ್ದೆವು, ನಮಗೆ ಹೀಗನ್ನಿಸಿತ್ತು' ಎಂಬ ಸತ್ಯವನ್ನು ಮರೆತುಬಿಟ್ಟಿರುತ್ತಾರೆ. ಅವರು ಮಕ್ಕಳ ಓದನ್ನಾಗಲಿ, ಇತರ ನಡವಳಿಕೆಗಳನ್ನಾಗಲೀ ತಮ್ಮ ಅನುಭವದ ಜಗತ್ತಿನ